**ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಘನ ನ್ಯಾಯಾಲಯ ಬ್ಯಾಡಗಿ.**
**ಕ್ರಿಮಿನಲ್ ಪ್ರಕರಣ ಸಂಖ್ಯೆ 144/2019**

ಪಿಡಬ್ಲ್ಯೂ: 12

ಸಿಡಬ್ಲ್ಯೂ: 15

ಹೆಸರು : ಆರ್ ಆರ್ ಪಾಟೀಲ್

ವಯಸ್ಸು : 56 ವರ್ಷ

ಉದ್ಯೋಗ : ಪಿ.ಐ. ಶಿಕಾರಿಪುರ ಗ್ರಾಮೀಣ

ವಾಸಸ್ಥಳ : ಶಿಕಾರಿಪುರ

ದಿನಾಂಕ : 20.07.2024 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ :**

ದಿನಾಂಕ: 03.01.2019 ರಿಂದ 29.01.2019 ರವರೆಗೆ ಬ್ಯಾಡಗಿ ವೃತ್ತದಲ್ಲಿ ಸಿ ಪಿ ಐ ಅಂತಾ ಕೆಲಸ ಮಾಡಿದ್ದೇನೆ.

ದಿನಾಂಕ: 09.01.2019 ರಂದು ಚಾಸಾ-14 ರವರಿಂದ ಕಡತವನ್ನು ತೆಗೆದುಕೊಂಡು ಪರಿಶೀಲನೆ ಮಾಡಿ ತನಿಖೆಯನ್ನು ಮುಂದುವರೆಸಿ ಅದೇ ದಿನ ಚಾಸಾ-12 ರಿಂದ ಬೆರಳುಮುದ್ರೆ ವರದಿ ಬಂದಿದ್ದು ಅದನ್ನು ಸ್ವೀಕರಿಸಿದ್ದೇನೆ.

ದಿನಾಂಕ: 22.01.2019 ರಂದು ಮಾನ್ಯ ನ್ಯಾಯಾಲಯದ ಆದೇಶದಂತೆ ಮಾಲು ಬಿಡುಗಡೆ ಪಂಚನಾಮೆಯನ್ನು ಶ್ರೀನಿವಾಸ ತಂದೆ ಬಸವರಾಜ ಕಲಕೋಟಿ ಮತ್ತು ಕಾಂತೇಶ ಕರಬಸಪ್ಪ ಬಂಡಿವಡ್ಡರ ಇವರ ಸಮಕ್ಷಮ ಮುಂಜಾನೆ 10.00 ರಿಂದ 12.00 ರವರೆಗೆ ಮಾಡಿ ಚಾಸಾ-01 ರವರಿಗೆ ನೀಡಿರುತ್ತೇನೆ. ಸದರಿ ಪಂಚನಾಮೆಯನ್ನು ಪಿಸಿ-828 ರವರು ಟೈಪ ಮಾಡಿರುತ್ತಾರೆ. ನಂತರ ಆರೋಪಿತನ ವಿರುದ್ದ ಸಾಕ್ಷ್ಯ ಕಂಡು ಬಂದಿದ್ದರಿಂದ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಬೆರಳುಮುದ್ರೆ ವರದಿಯನ್ನು ನಿಪಿ-42 ಎಂದು, ಸಾಕ್ಷಿ ಸಹಿಯನ್ನು ನಿಪಿ-42(ಎ) ಎಂದು, ಬೆರಳುಮುದ್ರೆ ಪ್ರಮಾಣಪತ್ರ ಮತ್ತು ಇತರೆ ದಾಖಲೆಗಳನ್ನು ನಿಪಿ-43 ರಿಂದ 47 ಎಂದು, ನಿಪಿ-42 ರ ಮೇಲಿನ ತಮ್ಮ ಸಹಿಯನ್ನು ನಿಪಿ-42(ಬಿ) ಎಂದು

ಗುರುತಿಸಲಾಯಿತು. ಜಪ್ತ ಕಾಲಕ್ಕೆ ಬಿಡುಗಡೆ ಮಾಡಿದ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-04 ರಿಂದ 23 ಎಂದು ಗುರುತಿಸಲಾಗಿದೆ. ಆರೋಪಿತನನ್ನು ಮತ್ತು ಮುದ್ದೆಮಾಲುಗಳನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :**

ಜಪ್ತಪಡಿಸಿದ ಮಾಲೀನ ಬಿಡುಗಡೆಯ ಸಮಯದಲ್ಲಿ ಪಂಚರನ್ನು ಪಿಸಿ-828 ರವರು ಕರೆದುಕೊಂಡು ಬಂದಿರುತ್ತಾರೆ. ಸದರಿ ಪಂಚರಿಗೆ ನೋಟಿಸನ್ನು ಜಾರಿ ಮಾಡಿರುತ್ತೇವೆ. ಸದರಿ ನೋಟಿಸನ್ನು ಈ ಕಡತದಲ್ಲಿ ಹಾಜರು ಪಡಿಸಿರುತ್ತೇನೆ. ಸದರಿ ದಿನ ಜಪ್ತಾದ ಮಾಲುಗಳ ಪಂಚನಾಮೆ ಮಾಡಿಲ್ಲಾ ಮತ್ತು ಪಂಚರು ನಮ್ಮ ಸಮಕ್ಷಮ ಹಾಜರು ಇರಲಿಲ್ಲಾ ಎಂದರೆ ಸರಿಯಲ್ಲಾ. ಈ ಪ್ರಕರಣಕ್ಕೆ ಅನುಕೂಲವಾಗಲು ಸುಳ್ಳು ಪಂಚನಾಮೆ ಮಾಡಿರುತ್ತೇವೆ ಅಂದರೆ ಸರಿಯಲ್ಲಾ. ಪಿಸಿ-828 ರವರು ಪಂಚನಾಮೆ ಬರೆದಿರುತ್ತಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ಭಾವಚಿತ್ರಗಳನ್ನು ಪಡೆದುಕೊಂಡಿಲ್ಲಾ ಅಂದರೆ ಸರಿಯಲ್ಲಾ ಬೆರಳುಮುದ್ರೆಯ ವರದಿಯನ್ನು ಪಡೆದುಕೊಂಡಿಲ್ಲಾ ಅಂದರೆ ಸರಿಯಲ್ಲಾ. ಆರೋಪಿತರು ಯಾವುದೇ ತಪ್ಪು ಮಾಡಿಲ್ಲಾ ಅಂತಾ ನನ್ನ ತನಿಖೆಯಲ್ಲಿ ಕಂಡು ಬಂದರು ಸಹ ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸ ಅದೆ.

ಜೆಎಂಎಫ್‌ಸಿ, ಬ್ಯಾಡಗಿ.